## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ

ಸಿ.ಸಿ.ನಂಃ 9737/2021 ಸಿ.ಡಬ್ಲ್ಯೂ –01 ಪಿ.ಡಬ್ಲ್ಯೂ -04

| | | |
|---|---|---|
| ಹೆಸರು | ಃ | ಶಿವಪುಜ್ಜಪ್ಪಾ |
| ತಂದೆ | ಃ | ಈರಣ್ಣಾ |
| ವಯಸ್ಸು | ಃ | 65 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಮಾದನ ಹಿಪ್ಪರಗಾ |

ದಿನಾಂಕಃ 27.06.2025

ಸತ್ಯ ಪ್ರತಿಜ್ಞೆಯ ಮೇರೆ ಗೆ

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದಃ-**

ಆರೋಪಿತರು ನನ್ನ ಸಹೋದರರು ಇರುತ್ತಾರೆ. ದಿಃ 19-07-2020 ರಂದು ನಾನು ಚಾಸಾ 6 ಮತ್ತು 7 ರವರು ಹೊಲಕ್ಕೆ ಹೋಗಿ ಕಸ ತೆಗೆಯುವಾಗ ಆರೋಪಿತರು ಬಂದು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದಾಗ ನಾನು ಅವರ ಎದುರಿಗೆ ಹೋದಾಗ 1 ನೇ ಆರೋಪಿಯು ಕೊಡಲಿಯಿಂದ ಹೊಡೆದ ಕಾರಣ ತಲೆಗೆ ಮತ್ತು ಕಿವಿಯ ಹತ್ತಿರ ಗಾಯ ಆಗಿ ನಾನು ಕೆಳಗೆ ಬಿದ್ದಿರುತ್ತೇನೆ. ನಂತರ ಆರೋಪಿತರು ಚಾಸಾ 6 ಮತ್ತು 7 ರವರಿಗೆ ಅವಾಚ್ಯವಾಗಿ ಬೈದು ಹೊಡಿದಿರುತ್ತಾರೆ. ನಂತರ ಚಾಸಾ 7 ರವರು ಪರಿಚಯದವರ ಜೀಪನ್ನು ಕರೆಯಿಸಿ ನನ್ನನ್ನು ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿದ್ದು ನಂತರ ಆಸ್ಪತ್ರೆಗೆ ಹೋಗಿರುತ್ತೇವೆ. ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ. ಸಾಕ್ಷಿಯು ದೂರಿನಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುಸಿದ್ದು ಅದನ್ನು ನಿಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಕೊಡಲಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾಲು 1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಡ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ನನಗೆ ೧ ನೇ ಆರೋಪಿಯು ಬಲ ತಲೆಗೆ ಮತ್ತು ಎಡಭಾಗದ ಕುತ್ತಿಗೆಗೆ ಮತ್ತು ಎಡಭುಜಕ್ಕೆ ಕೊಡಲಿಯಿಂದ ಹೊಡೆದಿರುತ್ತಾರೆ ಎಂದರೆ ಸರಿ. ಚಾಸಾ-೭ ರವರು ನನ್ನ ತಂದೆಗೆ ಯಾಕೆ ಹೊಡೆಯುತ್ತೀರಿ ಎಂದು ಕೇಳಲು ಹೋದಾಗ ಅದೇ ಕೊಡಲಿಯಿಂದ ಅವರ

ಎಡಗಡೆ ಹಣೆಗೆ ಹೊಡೆದಿರುತ್ತಾರೆ ಎಂದರೆ ಸರಿ. ಚಾಸಾ-೬ ರವರು ಜಗಳ ಬಿಡಲು ಬಂದಾಗ ಆರೋಪಿತರು ಅವರ ಕೈ ಹಿಡಿದು ಎಳೆದಾಡಿ ಸೀರೆ ಸೇರಗು ಜಗ್ಗಿ ನುಕಿಸಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರಃ ವಕೀಲರಿಂದ

ನನ್ನ ತಂದೆಯ ಹೆಸರು ಈರಣ್ಣಾ,ನನ್ನ ತಾತನ ಹೆಸರು ಸೊಮಲಿಂಗಪ್ಪಾ ಎಂದರೆ ಸರಿ. ನಾವು ೫ ಜನ ಅಣ್ಣತಮ್ಮದಿರು ಇದ್ದು ನಾನು ಹಿರಿಯವನು. ನನ್ನ ನಂತರ ವಿವೇಕಾನಂದ, ಅವರ ನಂತರ ದೇವೆಂದ್ರಪ್ಪಾ, ಸಿದ್ದಾರೂಢ, ಗುರುನಾಥ ನಾವು ಐದು ಜನರು ನಮ್ಮ ತಂದೆಯ ಆಸ್ತಿಯ ವಾರಸುದಾರರು ಎಂದರೆ ಸರಿ. ನಾನು ಕಸ ತೆಗೆಯಲು ಹೋದ ಜಮೀನು ನನ್ನ ತಂದೆಯ ಈರಣ್ಣಾ ಇವರ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನಿನ ಸರ್ವೆ ನಂಬರ 379 ಮತ್ತು 380 ಇರುತ್ತದೆ. ಸದರಿ ಜಮೀನಿನ ವಿಸ್ತೀರ್ಣ ನೆನಪು ಇರುವುದಿಲ್ಲ. ನಾನು ಕಸ ತೆಗೆಯುತ್ತಿದ್ದ ಹೊಲದ ಸರ್ವೆ ನಂಬರ ಹೇಳಲು ಬರುವುದಿಲ್ಲ. ಸದರಿ ಜಮೀನುಗಳು ನನ್ನ ಅಣ್ಣ-ತಮ್ಮಂದಿರ ಹೆಸರಿನಲ್ಲಿ ಇಲ್ಲ ಎಂದರೆ ಸರಿ. ಸದರಿ ಜಮೀನಿನ ದಕ್ಷಿಣ ದಿಕ್ಕಿಗೆ ನನ್ನ ಸಹೋದರನಾದ ವಿವೇಕಾನಂದ ಜಮೀನು ಬರುತ್ತದೆ. ಉತ್ತರ ದಿಕ್ಕಿಗೆ ಶಿವಗೌಡರ ಜಮೀನು ಬರುತ್ತದೆ. ಆರೋಪಿತರ ಜಮೀನು ನನ್ನ ಜಮೀನಿಗೆ ಹೊಂದಿಕೊಂಡು ಇರುವುದಿಲ್ಲ ಎಂದರೆ ಸರಿ. ನನ್ನ ಮತ್ತು ನನ್ನ ಸಹೋದರರ ಮಧ್ಯೆ ಜಮೀನು ವಿಭಾಗವಾದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ನನ್ನ ತಂದೆಯ ಹೆಸರಿನಲ್ಲಿ ಒಟ್ಟು ಎಷ್ಟು ಜಮೀನು ಇರುತ್ತದೆ ಎಂದು ಹೇಳಲು ಬರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಇರುವ ಜಮೀನಿನ ಪೂರ್ವಕ್ಕೆ ಶಿವರಣಪ್ಪಾ ಕೊಣದೆ ಅವರ ಜಮೀನು ಬರುತ್ತದೆ. ಪಶ್ಚಿಮ ದಿಕ್ಕಿಗೆ ಗೌಡರ ಜಮೀನು ಬರುತ್ತದೆ. ಉತ್ತರ ದಿಕ್ಕಿಗೆ ಶಿವಗೌಡ ಇವರ ಜಮೀನು ಬರುತ್ತದೆ. ದಕ್ಷಿಣ ದಿಕ್ಕಿಗೆ ಶೇಖಪ್ಪಾ ಅಷ್ಟಗಿ ಇವರ ಜಮೀನು ಬರುತ್ತದೆ.

2. ಜೂನ್-ಜುಲೈ ತಿಂಗಳಲ್ಲಿ ಜಮೀನಿನಲ್ಲಿ ಸಾಮಾನ್ಯವಾಗಿ ಕಸ ತೆಗೆಯುವುದು ಬಿತ್ತನೆ ಮಾಡುವುದು ಕೆಲಸ ನಡೆಯುತ್ತಿರುತ್ತದೆ ಎಂದರೆ ಸರಿ. ಜನರು ಅವರವರ ಜಮೀನಿನಲ್ಲಿ ಕೆಲಸ ಮಾಡುತ್ತಿರುತ್ತಾರೆ ಎಂದರೆ ಸರೆ. ಘಟನೆಯು ಬೆಳಗ್ಗೆ 11.00 ಗಂಟೆಯ ಒಳಗಾಗಿ ನಡೆದಿರುತ್ತದೆ. ಸುಮಾರು 1.00 ಗಂಟೆಯವರೆಗೂ ನಡೆದಿರುತ್ತದೆ. ಜಗಳ ನಡೆದಾಗ ಬೇರೆ ಯಾರು ಜನರು ಅಲ್ಲಿ ಇರಲಿಲ್ಲ. ಘಟನೆ ನಡೆದ ನಂತರ ಮಾದನ ಹಿಪ್ಪರಗಾ ಆಸ್ಪತ್ರೆಗೆ ಹೋಗಿದ್ದು, ನಂತರ ಕಲಬುರಗಿಯ ಆಸ್ಪತ್ರೆಗೆ ಹೋಗಿರುತ್ತೇವೆ. ರಕ್ತ ಹತ್ತಿದ ಬಟ್ಟೆಯನ್ನು ಪೋಲಿಸರು ತೆಗೆದುಕೊಂಡು ಹೋಗಿರುತ್ತಾರೆ. ನಾವು ಎಷ್ಟು ಗಂಟೆಗೆ ಮಾದನ ಹಿಪ್ಪರಗಾ ಆಸ್ಪತ್ರೆಗೆ ಹೋಗಿದ್ದೇವು ಎಂದು

ಹೇಳಲು ಬರುವುದಿಲ್ಲ. ಆಸ್ಪತ್ರೆಗೆ ಯಾರು ಯಾರು ಹೋಗಿದ್ದೀರಿ ಎಂದರೆ ಸಾಕ್ಷಿಯು ಆಗ ನನಗೆ ಪ್ರಜ್ಞೆ ಇರಲಿಲ್ಲ ಎಂದು ನುಡಿಯುತ್ತಾರೆ. ಘಟನೆ ನಡೆದ ನಂತರ ನನಗೆ ಪ್ರಜ್ಞೆ ತಪ್ಪಿದು ಕಲಬುರಗಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ ಆಸ್ಪತ್ರೆಯವರು ಕೋವಿಡ್-19 ಇದ್ದ ಕಾರಣ ಮನೆಗೆ ಹೋಗಬೇಕು ಅಂತಾ ತಿಳಿಸಿದ ಕಾರಣ ಹತ್ತಿರದಲ್ಲಿ ಇದ್ದ ನನ್ನ ಮಗ ಜ್ಞಾನಪ್ಪಾ ಅವರ ಮನೆಗೆ ಹೋಗಿರುತ್ತೇನೆ. ಅಲ್ಲಿ ನನಗೆ ಪ್ರಜ್ಞೆ ಸುಮಾರು ರಾತ್ರಿ 7.30 ಕ್ಕೆ ಬಂದಿರುತ್ತದೆ. ನಾನು ಪ್ರಜ್ಞೆ ತಪ್ಪಿ ಬಿದ್ದ ನಂತರ ನಡೆದ ಘಟನೆ ಮತ್ತು ನನ್ನನ್ನು ಅಲ್ಲಿ ಇಲ್ಲಿ ಕರೆದುಕೊಂಡು ಹೋದ ಬಗ್ಗೆ ನಮ್ಮ ಮನೆಯವರು ನನಗೆ ತಿಳಿಸಿರುತ್ತಾರೆ. ನನಗೆ ಆಸ್ಪತ್ರೆಗೆ ಜೀಪಿನಲ್ಲಿ ಕರೆದುಕೊಂಡು ಹೋಗಿದ್ದು ಅದರ ಸಂಖ್ಯೆ ಹೇಳಲು ಬರುವುದಿಲ್ಲ. ಘಟನೆ ನಡೆದ ನಂತರ ನನ್ನ ಮಗಳು ಚಾಸಾ-6 ಮತ್ತು 7 ರವರು ಮೊದಲು ನನ್ನನ್ನು ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿ ದೂರನ್ನು ದಾಖಲಿಸಿ ನಂತರ ಆಸ್ಪತ್ರೆಗೆ ಹೋಗಿರುತ್ತೇವೆ. ಆಗ ಸಮಯ ಎಷ್ಟು ಆಗಿತ್ತು ಎಂದು ನನಗೆ ಪ್ರಜ್ಞೆ ತಪ್ಪಿದ ಕಾರಣ ನನಗೆ ಹೇಳಲು ಬರುವುದಿಲ್ಲ. ಚಾಸಾ-6 ಮತ್ತು 7 ರವರು ಸೇರಿ ಪಿರ್ಯಾಧಿಯನ್ನು ನೀಡಿರುತ್ತಾರೆ. ಅದನ್ನು ಬರೆದುಕೊಟ್ಟಿರುತ್ತಾರೋ ಅಥವಾ ಟೈಪ ಮಾಡಿಕೊಟ್ಟಿರುತ್ತಾರೋ ನನಗೆ ಗೊತ್ತಿಲ್ಲ. ನನಗೆ ಕಲಬುರಗಿಯ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಪೋಲಿಸರು ಯಾರು ಬಂದಿರಲಿಲ್ಲ. ನನ್ನ ಮಗಳಿಗೆ ರಕ್ತ ಗಾಯ ಆದ ಬಗ್ಗೆ ನನಗೆ ಗೊತ್ತಿಲ್ಲ, ಕಾರಣ ನನಗೆ ಪ್ರಜ್ಞೆ ಇರಲಿಲ್ಲ. ಕೊಡಲಿಯ ಬಗ್ಗೆ ಚಾಸಾ-6 ಮತ್ತು 7 ರವರು ಪೋಲಿಸರಿಗೆ ಮಾಹಿತಿ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಮು.ಮಾ.1 ನ್ನು ತೋರಿಸಿ ಅದಕ್ಕೆ ರಕ್ತ ಹತ್ತಿಲ್ಲ ಎಂದರೆ ಸಾಕ್ಷಿಯು 5 ವರ್ಷಗಳ ಬಳಿಕ ಅದು ಕಾಣಿಸುವುದಿಲ್ಲ ಎಂದು ನುಡಿಯುತ್ತಾರೆ. ಪೋಲಿಸರಿಗೆ ಸದರಿ ಕೊಡಲಿಯನ್ನು ಯಾರು ಕೊಟ್ಟಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ. ಆಸ್ಪತ್ರೆಯಲ್ಲಿ ಕೋವಿಡ್ ಇದ್ದ ಕಾರಣ ನನ್ನನ್ನು ಆಸ್ಪತ್ರೆಯಲ್ಲಿ ದಾಖಲಿಸಿಕೊಂಡಿರಲಿಲ್ಲ.

3. ಆರೋಪಿತರ ಜಮೀನಿನ ಬಂದಾರಿಯು ನನ್ನ ಜಮೀನಿಗೆ ಹೊಂದಿಕೊಂಡು ಇರುವುದಿಲ್ಲ ಎಂದರೆ ಸರಿ. ನಮ್ಮ ಜಮೀನುಗಳು ಹಂಚಿಕೆಯಾಗಿದ್ದು, ಆದರೆ ಹಂಚಿಕೆಯ ಬಗ್ಗೆ ದಾಖಲೆಗಳು ಆಗಿರುವುದಿಲ್ಲ. ಆರೋಪಿತರು ನನಗೆ ಜಮೀನಿನಲ್ಲಿ ಪಾಲು ಕೇಳಿದ ಕಾರಣ ನಾನು ಅವರಿಗೆ ಆಸ್ತಿ ಕೊಡದೇ ಪೋಲಿಸರೊಂದಿಗೆ ಶಾಮಿಲಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಇಬ್ಬರು ಮಕ್ಕಳಿಗೆ ಸರ್ಕಾರಿ ನೌಕರಿ ಇದೆ ಎಂದರೆ ಸರಿ. 2 ನೇ ಆರೋಪಿಗೆ

ಇನ್ನು ಮದುವೆ ಆಗಿಲ್ಲ ಎಂದರೆ ಸರಿ. ನಮ್ಮ ಮನೆಗೆ ನಾನೇ ಹಿರಿಯವನು ಎಂದರೆ ಸರಿ. ನನ್ನ ಮಗಳು ಅವರ ಗಂಡನ ಮನೆಯಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ ಮಗಳು ಘಟನೆ ನಡೆದ ದಿನ ಹಾಜರು ಇರದೇ ಇದ್ದರೂ ಅವರು ಘಟನಾ ಸ್ಥಳದಲ್ಲಿ ಇದ್ದರು ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 19-07-2020 ರಂದು ನಾನು ಚಾಸಾ 6 ಮತ್ತು 7 ರವರು ಹೊಲಕ್ಕೆ ಹೋಗಿ ಕಸ ತೆಗೆಯುವಾಗ ಆರೋಪಿತರು ಬಂದು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದಾಗ ನಾನು ಅವರ ಎದುರಿಗೆ ಹೋದಾಗ 1 ನೇ ಆರೋಪಿಯು ಕೊಡಲಿಯಿಂದ ಹೊಡೆದ ಕಾರಣ ತಲೆಗೆ ಮತ್ತು ಕಿವಿಯ ಹತ್ತಿರ ಗಾಯ ಆಗಿ ನಾನು ಕೆಳಗೆ ಬಿದ್ದಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೋಪಿತರು ಚಾಸಾ 6 ಮತ್ತು 7 ರವರಿಗೆ ಅವಾಚ್ಯವಾಗಿ ಬೈದು ಹೊಡಿದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಚಾಸಾ 7 ರವರು ಪರಿಚಯದವರ ಜೀಪನ್ನು ಕರೆಯಿಸಿ ನನ್ನನ್ನು ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿದ್ದು ನಂತರ ಆಸ್ಪತ್ರೆಗೆ ಹೋಗಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ೧ ನೇ ಆರೋಪಿಯು ಬಲ ತಲೆಗೆ ಮತ್ತು ಎಡಭಾಗದ ಕುತ್ತಿಗೆಗೆ ಮತ್ತು ಎಡಭುಜಕ್ಕೆ ಕೊಡಲಿಯಿಂದ ಹೊಡೆದಿರುತ್ತಾರೆ ಎಂದರೆ ಸರಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-೭ ರವರು ನನ್ನ ತಂದೆಗೆ ಯಾಕೆ ಹೊಡೆಯುತ್ತೀರಿ ಎಂದು ಕೇಳಲು ಹೋದಾಗ ಅದೇ ಕೊಡಲಿಯಿಂದ ಅವರ ಎಡಗಡೆ ಹಣೆಗೆ ಹೊಡೆದಿರುತ್ತಾರೆ ಎಂದರೆ ಸರಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-೬ ರವರು ಜಗಳ ಬಿಡಲು ಬಂದಾಗ ಆರೋಪಿತರು ಅವರ ಕೈ ಹಿಡಿದು ಎಳೆದಾಡಿ ಸೀರೆ ಸೇರಗು ಜಗ್ಗಿ ನುಕಿಸಿರುತ್ತಾರೆ ಎಂದರೆ ಸರಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರುವಿಚಾರಣೆಃ- ಇರುವುದಿಲ್ಲ.**</u>

ಓ.ಹೇ.ಕೇ.ಸರಿ ಇದೆ.

ಸಿ.ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ.ಆಳಂದ